59	ವಾರ್ಡ್ ನಂ.24, ಹೆಚ್.ಬಿ.ಆರ್.ಲೇಔಟ್, 3ನೇ ಘಟ್ಟ, ಬಿಡಿಎ ಕಾಂಪ್ಲೆಕ್ಸ್ ಬಳಿ, ಬೆಂ.
60	ವಾರ್ಡ್ ನಂ.19, ಭೂಪಸಂದ್ರ ಮುಖ್ಯರಸ್ತೆ, 5ನೇ ಕ್ರಾಸ್, ಭೂಪಸಂದ್ರ ಬಸ್‌ಸ್ಟ್ಯಾಂಡ, ಬೆಂ.
61	ವಾರ್ಡ್ ನಂ.34, ಸಿ.ಎ.ಸೈಟ್, ಸಿ.ಐ.ಎಲ್.ಲೇಔಟ್, ಆರ್.ಟಿ.ನಗರ. ರಸ್ತೆ. ಬೆಂ.
62	ವಾರ್ಡ್ ನಂ.14, ಎ.ಜಿ.ಎಸ್. ಆಫೀಸ್ ಲೇಔಟ್, ಇಸ್ರೋ ಮುಖ್ಯ ರಸ್ತೆ, ಆರ್.ಎಂ.ವಿ, 2ನೇಘಟ್ಟ, ಬೆಂ.
63	ವಾರ್ಡ್ ನಂ.19, 6ನೇ ಮುಖ್ಯರಸ್ತೆ, ನ್ಯೂ ಬಿ.ಇ.ಎಲ್.ರಸ್ತೆ, ಆರ್.ಎಂ.ವಿ., 2ನೇ ಘಟ್ಟ, ಬೆಂ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸರ್ವೀಸ್ ರಸ್ತೆ ನಿರ್ಮಾಣ

909 (910); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್)

(ಅ) ಕೆಂಪೇಗೌಡ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ಬಳಿಯ ಟೋಲ್ ನಲ್ಲಿನ ದರಗಳನ್ನು ಏರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಇದನ್ನು ವಿರೋಧಿಸಿ, ತೀವ್ರ ಪ್ರತಿಭಟನೆ ವ್ಯಕ್ತವಾಗಿರುವುದು ನಿಜ ವಲ್ಲವೇ;

(ಇ) ಏರ್‌ಪೋರ್ಟ್ ರಸ್ತೆ ಟೋಲ್ ತಡೆಯುವ ಸಲುವಾಗಿ ಸರ್ವಿಸ್ ರಸ್ತೆ ನಿರ್ಮಿಸಲು ಸರ್ಕಾರ ಉದ್ದೇಶಿಸಿದೆಯೇ;

(ಈ) ಹಾಗಿದ್ದಲ್ಲಿ, ಈ ಸರ್ವಿಸ್ ರಸ್ತೆ ಯಾವಾಗ ಸಿದ್ದಗೊಳ್ಳುತ್ತದೆ?

ಡಾ: ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

(ಅ) ಬಂದಿದೆ.

(ಆ) ಹೌದು.

(ಇ)&(ಈ) ಗುತ್ತಿಗೆ ಕರಾರಿನ ಪ್ರಕಾರ, ಸರ್ವಿಸ್ ರಸ್ತೆಯನ್ನು, ನಿರ್ಮಿಸ ಲಾಗಿದ್ದು, ಕೆಲವೊಂದು ಭಾಗಗಳಲ್ಲಿ ಭೂಮಿ ಲಭ್ಯವಿರದಿರುವ ಕಾರಣ ನಿರ್ಮಿಸಿರುವುದಿಲ್ಲ. ಆದಾಗ್ಯೂ ಗುತ್ತಿಗೆ ಕರಾರಿನ್ವಯ, ಸರ್ವಿಸ್ ರಸ್ತೆಯನ್ನು ಉಪಯೋಗಿಸಿಕೊಂಡು, ಟೋಲ್ ಪ್ಲಾಜಾವನ್ನು ದಾಟುವ ಬಳಕೆದಾರರು ಸಹ, ಟೋಲ್ ದರಗಳನ್ನು ಕೊಡಬೇಕಾಗುತ್ತದೆ.

ಉಗ್ರಾಣ ನೀತಿ ಕುರಿತು

910 (1346); ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ (ರೋಣ)

(ಅ) ಸಹಕಾರಿ ಸಂಘಗಳಿಗೆ ಸರಕಾರದಿಂದ ಉಗ್ರಾಣಗಳನ್ನು ನಿರ್ಮಾಣ ಮಾಡಲು ಸಹಾಯಧನ ಪಡೆಯಲು ಸರ್ಕಾರದ ಮಾನದಂಡಗಳೇನು;

(ಆ) ಇಲ್ಲಿಯವರೆಗೆ ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ಅಂತಹ ಸಹಕಾರಿ ಸಂಘಗಳು ಸರ್ಕಾರ ಮತ್ತು ಇತರೆ ಸಂಸ್ಥೆಗಳಿಂದ ಸರ್ಕಾರ ದಿಂದ ಸಹಾಯಧನ ಪಡೆದಂತಹ ಸಂಘಗಳು ಎಷ್ಟು; (ವಿವರ ನೀಡು ವುದು)

(ಇ) ಇಲ್ಲಿಯವರೆಗೆ ಯಾವುದೇ ಸಹಾಯಧನ ಪಡೆಯದ ಸಂಘಗಳಿಗೆ ಸರ್ಕಾರ ಉಗ್ರಾಣ ಮಾಡಲು ಹಣಕಾಸಿನ ನೆರವು ನೀಡುವುದೇ?

ಶ್ರೀ ಹೆಚ್. ಸಿ. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು)

(ಅ) ಸಹಕಾರ ಸಂಘಗಳಿಗೆ ಸರ್ಕಾರದಿಂದ ಉಗ್ರಾಣವನ್ನು ನಿರ್ಮಾಣ ಮಾಡಲು ಸಹಾಯಧನವನ್ನು ನೀಡಲು ಈ ಕೆಳಕಂಡ ಮಾನದಂಡ ಗಳನ್ನು ಅನುಸರಿಸಬೇಕಾಗುತ್ತದೆ.

1. ಸಹಕಾರ ಸಂಘವು ನಬಾರ್ಡ್ ಹಾಗೂ ಎನ್‌ಸಿಡಿಸಿ ಸಂಸ್ಥೆಯಿಂದ ಕಾಲ ಕಾಲಕ್ಕೆ ಹೊರಡಿಸಲಾಗುವ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸ ಬೇಕಾಗಿರುತ್ತದೆ.